**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ ಟಿ.ನರಸೀಪುರ**

**ಸಿಸಿ ನಂಃ 684/2023**

**ಸಿಡಬ್ಲ್ಯೂ-3 ಪಿಡಬ್ಲ್ಯೂ-6**

| | | |
|---|---|---|
| ಸಾಕ್ಷಿದಾರರ ಹೆಸರು | : | ವಸಂತ್ |
| ತಂದೆಯ ಹೆಸರು | : | ನಂಜು |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ತಡಿಮಾಲಂಗಿ ಗ್ರಾಮ |

**ಸಾಕ್ಷಿಗೆ ದಿನಾಂಕಃ 14.08.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮೃತ ಮಹದೇವಮ್ಮರವರು ನನಗೆ ಗೊತ್ತು. ಚಾಸಾ.1 ಮತ್ತು 2 ರವರು ನನಗೆ ಗೊತ್ತು. ಆರೋಪಿಯು ನನಗೆ ಗೊತ್ತು. ದಿನಾಂಕ.13.07.2023 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ನಾನು ಅಮ್ಮಾಜಿ ಕಟ್ಟೆಯ ಕೊಳ್ಳೇಗಾಲ ಮಾದಾಪುರ ಮುಖ್ಯ ರಸ್ತೆಯಲ್ಲಿ ಕಬಾಬ್ ವ್ಯಾಪಾರವನ್ನು ಮಾಡುತ್ತಿದ್ದು, ಆರೋಪಿಯು ತನ್ನ ಬಾಬ್ತು ಕೆ ಎ-55 ಬಿ-6100 ಹೊಂಡಾ ಆಕ್ಟೀವಾ ಸ್ಕೂಟರ್ ನಲ್ಲಿ ಕೊಳ್ಳೇಗಾಲದಿಂದ ಮಾದಾಪುರ ಗ್ರಾಮದ ಕಡೆ ಬಂದಿದ್ದು, ಸದರಿ ವಾಹನದಲ್ಲಿ 3 ಜನ ಕುಳಿತಿದ್ದರು. ಆರೋಪಿಯು ತನ್ನ ವಾಹನವನ್ನು ಅತಿ ವೇಗದಿಂದ ಚಲಾಯಿಸಿಕೊಂಡು ಬಂದು ಮೃತ ಮಹದೇವಮ್ಮ ನವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರ ತಲೆಯು ತೂತು ಆಗಿ ರಕ್ತ ಬರುತ್ತಿತ್ತು.

ನಂತರ ನಾನು ಮತ್ತು ಚಾಸಾ.1 ಮತ್ತು 2 ರವರು ಮೃತ ಮಹದೇವಮ್ಮ ನವರನ್ನು ಸಮಾಧಾನ ಪಡಿಸುವಾಗ ಆರೋಪಿ ಮತ್ತು ಅವರ ಜೊತೆಗಿದ್ದವರು ಸ್ಥಳದಿಂದ ಪರಾರಿಯಾದರು. ಚಾಸಾ.12 ರವರು ಸದರಿ ಸ್ಥಳದಲ್ಲಿ ಆರೋಪಿಯ ಬಾಬ್ತು ವಾಹನದ ಫೋಟೊ ತೆಗೆದಿದ್ದರು. ನಂತರ ಮೃತ ಮಹದೇವಮ್ಮ ನವರನ್ನು ನಾನು ಮತ್ತು ಚಾಸಾ.2 ರವರು ಸರ್ಕಾರಿ ಆಸ್ಪತ್ರೆ ಟಿ.ನರಸೀಪುರಕ್ಕೆ ಕರೆದುಕೊಂಡು ಬಂದು ಸೇರಿಸಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗ ಮೃತ ಮಹದೇವಮ್ಮ ನವರನ್ನು ಮೈಸೂರಿಗೆ ಕರೆದುಕೊಂಡು ಹೋದೆವು. ಈ ಸಂಬಂಧ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಅಪಘಾತವಾಗಿರುತ್ತದೆ.

ಸಾಕ್ಷಿಯು ನಿ.ಪಿ.3 ರಿಂದ 6 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಗೈರು ಹಾಜರಿದ್ದು, ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಜಿ.ಆರ್.ಎಸ್. ರವರಿಂದ :**

ತಡಿಮಾಲಂಗಿ ಹೊಸಬಡಾವಣೆಯನ್ನು ಅಮ್ಮಾಜಿ ಕಟ್ಟೆ ಎಂದು ಕರೆಯುತ್ತಾರೆ ಎಂದರೆ ಸರಿ. ಅಪಘಾತ ಆದ ಸ್ಥಳದ 10 ಮೀಟರ್ ದೂರದಲ್ಲಿ ಅಮ್ಮಾಜಿ ಕಟ್ಟಯ ಸರ್ಕಲ್ ಬಳಿ ಕಬಾಬ್ ವ್ಯಾಪಾರವನ್ನು ಮಾಡುತ್ತಿದ್ದೆನು. ವ್ಯಾಪಾರವನ್ನು ಮಧ್ಯಾಹ್ನ 3.00-9.00 ಗಂಟೆಯವರೆಗೆ ಮಾಡುತ್ತೇನೆ. ರಾತ್ರಿ 7.00 - 8.000 ಗಂಟೆಯ ಸಮಯದಲ್ಲಿ ಹೆಚ್ಚಿನ ವ್ಯಾಪಾರ ನಡೆಯುತ್ತದೆ ಎಂದೆ ಸರಿ. ನಾನು ಒಬ್ಬನೇ ಕೆಲಸವನ್ನು ಮಾಡುತ್ತೇನೆ. ನನ್ನ ಅಂಗಡಿಯ ಮುಂಭಾಗ ಗ್ಲಾಸನ್ನು ಅಳವಡಿಸಿರುತ್ತೇನೆ ಎಂದರೆ ಸರಿ. ಗ್ಲಾಸನ್ನು ಹೊರಭಾಗದಿಂದ ಧೂಳು ಬರಬಾರದು ಎಂದು ಕಾಣಬಾರದು ಎಂದು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳವು ಮಾದಾಪುರ ಗ್ರಾಮದ ಕಡೆಗೆ ಬರುತ್ತದೆ.

ನಮ್ಮ ಅಂಗಡಿಯಿಂದ 10 ಮೀಟರ್ ದೂರದಲ್ಲಿ ಮಾದಾಪುರ ಕಡೆಗೆ ಅಪಘಾತವಾಗಿರುತ್ತದೆ. ನನ್ನ ಅಂಗಡಿಯನ್ನು ರಸ್ತೆಯ ಕಡೆಗೆ ಇಟ್ಟಿರುತ್ತೇನೆ. ಅಪಘಾತ ಆಗಿರುವುದು ನನಗೆ ಕಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವ್ಯಾಪಾರದಲ್ಲಿ Busy ಯಾಗಿರುವುದರಿಂದ ನಾನು ಅಪಘಾತವನ್ನು ನೊಡಿವುದಿಲ್ಲ ಎಂದರೆ ಸರಿಯಲ್ಲ. ಚಾಸಾ.12 ರವರರು ಫೋಟೋ ತೆಗೆದ ವಿಚಾರವವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ಆಗಿರುವುದಿಲ್ಲ ಹಾಗೂ ಅದನ್ನು ನಾನು ನೋಡಿರುವುದಿಲ್ಲ ಹಾಗೂ ಮೃತ ಮಹದೇವಮ್ಮ ನವರು ನಮ್ಮ ಗ್ರಾಮಸ್ಥರಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

**ಓ.ಹೇ.ಕೇ.ಸ. ಇದೆ.,**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ**
**ನ್ಯಾಯಾಲಯ, ತಿ. ನರಸಿಪುರ**